

## ಚೌಕಟ್ಟು ಮೀರುವ ಅಗತ್ಯ

ನಮ್ಮ ಬಹುತೇಕ ಮಹಿಳಾ ಪ್ರಧಾನ ಚಿತ್ರಗಳು ಸಾಮಾನ್ಯವಾಗಿ ಎರಡು ಬಗೆಯ ಕಥಾವಸ್ತುಗಳನ್ನು ಹೊಂದಿರುತ್ತವೆ. ಮೊದಲನೆಯದು, ಹೆಣ್ಣಿನ ಲೈಂಗಿಕ ಶೋಷಣೆಗೆ ಸಂಬಂಧಿಸಿದ್ದು. (ಈ ಮೊದಲು ಹೆಣ್ಣಿನ ಕೌಟುಂಬಿಕ ಸಮಸ್ಯೆಗಳಿಗೆ ಸಂಬಂಧಿಸಿದ ಸಿನಿಮಾಗಳು ಹೆಚ್ಚಾಗಿದ್ದವು. ಆ ಸ್ಥಾನವನ್ನೀಗ ಲೈಂಗಿಕ ಶೋಷಣೆಯ ಕಥನಗಳು ಅಲಂಕರಿಸಿವೆ). ಮಹಿಳಾ ಕಥನದ ಮತ್ತೊಂದು ಸಾಧ್ಯತೆ, ಹೆಣ್ಣುಮಕ್ಕಳನ್ನು ದೆವ್ವಗಳನ್ನಾಗಿಸುವುದು!

ದೆವ್ವದ ಕಥನಗಳು ಅಪ್ಪಟ ವ್ಯಾಪಾರಿ ತಂತ್ರಗಳಾದುದರಿಂದ ಅಂಥ ಚಿತ್ರಗಳನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. ಲೈಂಗಿಕ ಶೋಷಣೆಯ ಕಥನಗಳು ಈ ಹೊತ್ತಿನ ಅನಿವಾರ್ಯ ಎನ್ನುವುದು ನಿಜ. ಹಾಗಾಗಿ, ಅಂಥ ವಸ್ತುಗಳು ಸಿನಿಮಾದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವುದೂ ಸಹಜ. ಆದರೆ, ಕೌಟುಂಬಿಕ ಚೌಕಟ್ಟಿನಾಚೆಗೆ, ಆಧುನಿಕ ಹೆಣ್ಣಿನ ಭಾವವಲಯವನ್ನು ನೋಡಲು ಪ್ರಯತ್ನಿಸುವ ಪ್ರಯತ್ನಗಳೇ ಕನ್ನಡದಲ್ಲಿ ನಡೆದಂತಿಲ್ಲ. ವಿವಿಧ ವಯೋಮಾನಗಳ ಮಹಿಳೆಯರ ಭಾವಲೋಕವನ್ನು ಅನಾವರಣಗೊಳಿಸುವ ಪ್ರಯತ್ನಗಳೂ ಕಡಿಮೆ. ಇಂಥ ಪ್ರಯತ್ನಗಳ ಬಗ್ಗೆ ಯುವ ನಿರ್ದೇಶಕರು ಗಮನಹರಿಸಬೇಕಾಗಿದೆ.

ಎನ್ನಿಸಿಕೊಂಡವರು. 'ರಾಟೆ', 'ಉರ್ವಿ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಅವರ ನಟನಾಪ್ರತಿಭೆಗೆ ಉದಾಹರಣೆಗಳು. ಸುದೀಪ್ ಹಾಗೂ ಶಿವರಾಜ್‌ಕುಮಾರ್ ಒಟ್ಟಿಗೆ ನಟಿಸುತ್ತಿರುವ ಪ್ರೇಮ್ ನಿರ್ದೇಶನದ 'ದಿ ವಿಲನ್' ಚಿತ್ರದಲ್ಲೂ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿರುವುದು ಶ್ರುತಿ ಅವರ ಪ್ರತಿಭೆ–ಬೇಡಿಕೆಯನ್ನು ಸೂಚಿಸುವಂತಿದೆ.

ಶ್ರುತಿ ಅವರಂತೆಯೇ ಶ್ರದ್ಧಾ ಶ್ರೀನಾಥ್ ಕೂಡ ಪವನ್ ಕುಮಾರ್ ಮೂಲಕ ಚಿತ್ರರಂಗಕ್ಕೆ ಪರಿಚಯಗೊಂಡ ಚೆಲುವೆ. 'ಯು ಟರ್ನ್' ಖ್ಯಾತಿಯ ಶ್ರದ್ಧಾ, 'ಉರ್ವಿ' ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಸುನಿ ನಿರ್ದೇಶನದ 'ಆಪರೇಷನ್ ಅಲಮೇಲಮ್ಮ' ಚಿತ್ರದಲ್ಲೂ ಅವರದು ಪ್ರಮುಖ ಪಾತ್ರ. ಪರಭಾಷಾ ಚಿತ್ರಗಳಲ್ಲೂ ಬೇಡಿಕೆ ಕುದುರಿಸಿಕೊಳ್ಳುತ್ತಿರುವ ಶ್ರದ್ಧಾ ಅವರ ನಾಳೆಗಳು ಉಜ್ವಲವಾಗಿರುವಂತಿವೆ.

ಇನ್ನು 'ರಂಗಿತರಂಗ'ದ ರಾಧಿಕಾ ಚೇತನ್ 'ಯು ಟರ್ನ್' ಚಿತ್ರದ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ಟಿ.ಎನ್. ಸೀತಾರಾಮ್‌ರ 'ಕಾಫೀತೋಟ'ದಲ್ಲೂ ಅವರು ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ.

ಕವಿತಾ ಲಂಕೇಶರ 'ಅವ್ವ' ಚಿತ್ರದ ಸಾವಂತ್ರಿ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸಿದ್ದ ನಿವೇದಿತಾ, ಪಿ. ಶೇಷಾದ್ರಿ ನಿರ್ದೇಶನದ 'ಡಿಸೆಂಬರ್ 1' ಚಿತ್ರದ ಮೂಲಕ, ಎಂಥ ಪಾತ್ರವನ್ನೂ ನಿರ್ವಹಿಸಬಲ್ಲೆ ಎಂಬುದನ್ನು ಸಾಬೀತುಪಡಿಸಿದ್ದರು. ಇತ್ತೀಚಿನ 'ಶುದ್ಧಿ' ನಿವೇದಿತಾ ನಟನೆಯ ಮತ್ತೊಂದು ಪ್ರಮುಖ ಚಿತ್ರ.

'ನೀರ್ ದೋಸೆ' ಚಿತ್ರದ ಹರಿಪ್ರಿಯಾ, 'ಜಟ್ಟ' ಚಿತ್ರದ ಸುಕೃತಾ ವಾಗ್ಲೆ, 'ಲವ್ ಇನ್ ಮಂಡ್ಯ'ದ ಸಿಂಧು ಲೋಕನಾಥ್, 'ಕೆಂಡಸಂಪಿಗೆ'ಯ ಮಾನ್ವಿತಾ, 'ಕಾಫೀತೋಟ'ದ ಸಂಯುಕ್ತಾ – ಇವರೆಲ್ಲ ಸೂಕ್ತ ಅವಕಾಶ ದೊರೆತಲ್ಲಿ ಮಿಂಚಬಲ್ಲ ಪ್ರತಿಭಾವಂತ ಕನ್ನಡತಿಯರು.

### ಅಲೆಯಲ್ಲ, ಬೆಳವಣಿಗೆ!

ಕನ್ನಡ ಚಿತ್ರರಂಗದಲ್ಲಿ ಹೆಣ್ಣುಮಕ್ಕಳು ಗಮನಾರ್ಹ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿರುವುದನ್ನು ಅಲೆಯ ರೂಪದಲ್ಲಿ ಗುರ್ತಿಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ, ಇದನ್ನು ಅಲೆ ಎಂದು ಗುರ್ತಿಸುವುದಕ್ಕಿಂತಲೂ ಗಮನಾರ್ಹ ಬೆಳವಣಿಗೆ ಎಂದು ಗುರ್ತಿಸುವುದು ಸೂಕ್ತ ಎನ್ನಿಸುತ್ತದೆ. ಏಕೆಂದರೆ, 'ಅಲೆ' ಎನ್ನುವುದು ಹೀಗೆ ಬಂದು ಹಾಗೆ ಹೋಗುವಂತಹದು. 'ಬೆಳವಣಿಗೆ' ಅಂತರ್ಜಲದ ರೀತಿ ನಾಳೆಗಳನ್ನು ಪೊರೆಯುವಂತಹುದು.

'ಒಂದಷ್ಟು ಮಹಿಳಾಪ್ರಧಾನ ಸಿನಿಮಾಗಳು ತೆರೆಕಂಡಿರುವುದನ್ನು ಒಂದು 'ಅಲೆ'ಯ ರೂಪದಲ್ಲಿ ಗುರ್ತಿಸುವುದು ಸರಿಯಲ್ಲ' ಎಂದು ಹಿರಿಯ ನಿರ್ದೇಶಕ ಪಿ.ಎಚ್. ವಿಶ್ವನಾಥ್ ಹೇಳುತ್ತಾರೆ. ಅವರ ಪ್ರಕಾರ – 'ಇದೊಂದು ಒಳ್ಳೆಯ ಬೆಳವಣಿಗೆ'.

ಈ ಹೊತ್ತಿನ ಮಹಿಳಾ ಕಥನಗಳನ್ನು ಗಮನದಲ್ಲಿಟ್ಟುಕೊಂಡೂ –

ನಿವೇದಿತಾ